ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ-ಸಿಂಡಿಕೇಟ್/393/2024-25 ದಿನಾಂಕ: 27.02.2025

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

ವಿಷಯ: ದಿನಾಂಕ: 25.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 25.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

BENGALURU CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ-ಸಿಂಡಿಕೇಟ್/393/2024-25 ದಿನಾಂಕ: 27.02.2025

ದಿನಾಂಕ 25.02.2025 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಶ್ರೀ. ಕೆ. ಎಂ. ಸುರೇಶ್ ಕುಮಾರ್<br>ಜಂಟಿ ನಿರ್ದೇಶಕರು<br>ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 4. | ಡಾ. ಬಿ. ಆರ್. ಸುಪ್ರೀತ್ | ಸದಸ್ಯರು |
| 5. | ಡಾ. ಚೈತ್ರ ಟಿ. ಎಂ. | ಸದಸ್ಯರು |
| 6. | ಡಾ. ಸುಮಯಾ ಫಾತೀಮಾ | ಸದಸ್ಯರು |
| 7. | ಡಾ. ಎಂ. ಆರ್. ಲಕ್ಷ್ಮೀನಾರಾಯಣ | ಸದಸ್ಯರು |
| 8. | ಡಾ. ಎಲಿಝಾಬೆತ್ ಜಾಸ್ಮಿನ್ | ಸದಸ್ಯರು |
| 9. | ಶ್ರೀಮತಿ. ಡಿ. ಆರ್. ಸುಧಾ | ಸದಸ್ಯರು |
| 10. | ಶ್ರೀಮತಿ ಆಯೇಷಾ ಫರ್ಜಾನಾ | ಸದಸ್ಯರು |
| 11. | ಡಾ. ಹೆಚ್. ಕೃಷ್ಣರಾಮ್, | ಸದಸ್ಯರು |
| 12. | ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾ | ಸದಸ್ಯರು |
| 13. | ಶ್ರೀ ವಿ. ಶಿವಕುಮಾರ್, | ಸದಸ್ಯರು |
| 14. | ಶ್ರೀ ಕೆ.ಪಿ. ಪಾಟೀಲ್ | ಸದಸ್ಯರು |
| 15. | ಶೀಮತಿ. ಶಿಲ್ಪಶ್ರೀ. ವಿ. ಎನ್ | ಸದಸ್ಯರು |
| 16. | ಡಾ. ಕೆ. ಶಿವಶಂಕರ್ | ಸದಸ್ಯರು |
| 17. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 18. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡ ಮಾನ್ಯ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರುಗಳಿಗೆ ಕುಲಸಚಿವರು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ದಿನಾಂಕ 4.02.2025 ರಿಂದ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕೆಳಗಿನ ಮಾಹಿತಿಯನ್ನು ಸಭೆಗೆ ನೀಡಿದರು.

1. ದಿನಾಂಕ 05.02.2025 ಮತ್ತು 06.02.2025 ರಂದು ಕನ್ನಡ ಅಧ್ಯಯನ ವಿಭಾಗದ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನ 'ವಿಶ್ವ ಮಾನವ ದಿನಾಚರಣೆ' ಅಂಗವಾಗಿ 'ಕುವೆಂಪು ಸಾಹಿತ್ಯದರ್ಶನ' ಕುರಿತು ಎರಡು ದಿವಸಗಳ ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಲಾಯಿತು. ಹಿರಿಯ ಸಾಹಿತಿಗಳಾದ ಪ್ರೊ. ಎಸ್.ಜಿ ಸಿದ್ದರಾಮಯ್ಯ ಮತ್ತು ಶ್ರೀ. ಅಗ್ರಹಾರ ಕೃಷ್ಣಮೂರ್ತಿ, ಹಿಂದಿನ ಕಾರ್ಯದರ್ಶಿಗಳು, ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

2. ದಿನಾಂಕ 06.02.2025ರಂದು ಗಣಕ ವಿಜ್ಞಾನ ವಿಭಾಗದಲ್ಲಿ ಇಂಟರ್ನ್‌ಶಿಪ್ ಮತ್ತು ಉದ್ಯೋಗ ಮೇಳವನ್ನು (Job Drive) ನ್ಯಾಸ್ ಕಾಮ್ ಫೌಂಡೇಶನ್, ಐಟಿಸಿ ಇನಫೊಟೆಕ್, ಐಸೆಕ್ಟ್ ಮತ್ತು ಡೆಸ್ಸೆಪಲ್ಸ್ ಇಂಡಿಯ ಸಂಸ್ಥೆಗಳ ಸಹಯೋಗದೊಂದಿಗೆ ಜರುಗಿಸಲಾಯಿತು. ಒಟ್ಟು 1480 ಅಭ್ಯರ್ಥಿಗಳು ನೊಂದಣಿ ಮಾಡಿಕೊಂಡಿದ್ದು, 102 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ 15 ಉದ್ಯೋಗ ಸಂಸ್ಥೆಗಳು ಭಾಗವಹಿಸಿರುತ್ತವೆ.

3. ದಿನಾಂಕ 06.02.2025ರಂದು ರಷಿಯಾ ದೇಶದ ರಾಯಭಾರಿಗಳಾದ ಗೌರವಾನ್ವಿತ ಶ್ರೀ ಡೆನಿಸ್ ಅಲಿಪೋವ್‌ರವರು ಹಾಗೂ ರಷಿಯಾ ಹೌಸ್ ನಿರ್ದೇಶಕಿಯವರಾದ ಡಾ. ಎಲೆನಾ ರೆಮಿಝೋವಾ ಹಾಗೂ ತಂಡದವರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ರಷಿಯಾ ದೇಶದ ವಿಶ್ವವಿದ್ಯಾನಿಲಯಗಳು ಮತ್ತು ಅಲ್ಲಿಯ ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹೊಂದಬಹುದಾದ ಸಹಭಾಗಿತ್ವ ಕುರಿತು ಕುಲಪತಿಗಳು ಮತ್ತು ಶಿಕ್ಷಕ ವೃಂದದ ಜೊತೆಗೆ ಚರ್ಚಿಸಿದರು. ಇದೇ ಸಂದರ್ಭದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ರಷ್ಯಾ ಅಧ್ಯಯನ ಕೇಂದ್ರ ಪ್ರಾರಂಭಿಸುವ ಕುರಿತು ಕ್ರಮವಹಿಸಲಾಗುವುದೆಂದು ರಷಿಯಾ ದೇಶದ ರಾಯಭಾರಿಗಳು ತಿಳಿಸಿದರು.

4. ದಿನಾಂಕ: 11.02.2025 ರಂದು ಭಾರತ ಸರ್ಕಾರದ ಯುವಜನ ಸೇವೆಗಳು ಮತ್ತು ಕ್ರೀಡಾ ಇಲಾಖೆ, ಎನ್.ಎಸ್.ಎಸ್. ಪ್ರಾದೇಶಿಕ ನಿರ್ದೇಶನಾಲಯ, ರಾಜ್ಯ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಎನ್.ಎಸ್.ಎಸ್. ಘಟಕ, ಮತ್ತು ಬೆಂಗಳೂರು ನಗರ ವಿಶ್ವವಿದ್ಯಾನಿಲಯಗಳ ಸಂಯುಕ್ತ ಆಶ್ರಯದಲ್ಲಿ, ನಗರದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕದಲ್ಲಿ ಜರುಗಿದ ಎನ್.ಎಸ್.ಎಸ್ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

5. ದಿನಾಂಕ: 15.02.2025 ರಂದು ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ Hon'ble Dr. Justice V. Gopala Gowda ರವರು ಅಧ್ಯಕ್ಷರಾಗಿ ಹಾಗೂ ವಿವಿಧ ಗೌರವಾನ್ವಿತ ನ್ಯಾಯವಾದಿಗಳು ಸದಸ್ಯರಾಗಿರುವ Indian Conference of Intellectuals ಸಂಸ್ಥೆ ಆಯೋಜಿಸಿದ Constitutional Aspects on Environmental Law ವಿಷಯ ಕುರಿತು ಜರುಗಿದ ಸಮ್ಮೇಳನದಲ್ಲಿ ವಿವಿಧ ಸಾಮಾಜಿಕ / ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ನಾನು ಉನ್ನತ ಶಿಕ್ಷಣ ವಿಭಾಗದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಭಾರತದ

ಸರ್ವೋಚ್ಚ ನ್ಯಾಯಲಯದ ನ್ಯಾಯಮೂರ್ತಿಗಳಾದ Hon'ble Mr. Justice Prasanna B. Varaleರವರು ***"The Great Son of India"*** ಪ್ರಶಸ್ತಿಯನ್ನು ನೀಡಿದರು.

6. ದಿನಾಂಕ: 18.02.2025 ರಂದು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ವಿಭಾಗ ಹಾಗೂ ನಗರದ ಕ್ರೈಸ್ಟ್ ಡೀಮ್ಡ್ ಟು ಬಿ ಯುನಿವರ್ಸಿಟಿ ಸಹಯೋಗದೊಂದಿಗೆ "Youth Addiction and Treatment" ಕುರಿತು ಕಾರ್ಯಾಗಾರದ ಉದ್ಘಾಟನೆಯನ್ನು ನೆರವೇರಿಸಲಾಯಿತು. ಈ ಕಾರ್ಯಾಗಾರದಲ್ಲಿ ಕ್ರೈಸ್ಟ್ ವಿಶ್ವವಿದ್ಯಾನಿಲಯದ ಪ್ರೊ ವಿಕ್ಟರ್ ಪೌಲ್, ಪ್ರೊ. ಸುಪರ್ಣ ಮಜುಂಮ್‌ದಾರ್‌ರವರು ಪಾಲ್ಗೊಂಡಿದ್ದರು.

ಮೇಲಿನ ವರದಿಯನ್ನು ಮಂಡಿಸಿದ ನಂತರ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

ಅದರಂತೆ ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ: 01**

Sub: Selection of the Syndicate nominee for the Search Committee under Section 14(2) of KSU Act, 2000.

Ref: Letter No. GS 02 BCU 2025 dated. 13.02.2025 received from the Special Secretary to Governor, Raj Bhavan, Bengaluru-560001

***REFERENCE NOTE:***

The Special Secretary to Governor, Raj Bhavan, Benagluru has requested the University to select a suitable nominee of the Syndicate for the proposed Search Committee for appointment of Vice-Chancellor as per the following provision of Sec 14(2) & (3) of the Karnataka State Universities Act 2000:

14(2): The State Government shall constitue a Search Committee consisting of four persons of whom, one shall be nominated by the Chancellor, one by the University Grants Commission, one by the State Government and one by the Syndicate. The State Government shall appoint one of the members as the Chairman of the Committee. The Secretary to Government incharge of Higher Education or his nominee not below the rank of the Deputy Secretary to Government shall be the convenor of the Search Committee.

14(3): No person connected with the affairs of the State Government, the University or any College or institution affiliated to the University shall be nominated as the member of the Search Commmittee.

Accordingly, the matter is placed before the Syndicate to select a nominee of the Syndicate under Section 14(2) of KSU Act, 2000.

*ವಿವರಣೆ:*

ಮಾನ್ಯ ಕುಲಪತಿಗಳು ವಿವರಣೆ ನೀಡಿ, ವಿಶ್ವವಿದ್ಯಾನಿಲಯದ ಪ್ರಾರಂಭದಿಂದ ಇದುವರೆಗಿನ ವಿಶ್ವವಿದ್ಯಾಲಯದ ವಿವಿಧ ಹಂತಗಳ ಬೆಳವಣಿಗೆ ಹಾಗೂ ಕುಲಪತಿಗಳ ನೇಮಕಾತಿಗಾಗಿ ರಚಿಸಬೇಕಾದ ಆಯ್ಕೆ ಸಮಿತಿಯ ರೂಪುರೇಷೆಗಳ ಕುರಿತು ಸಭೆಗೆ ಮಾಹಿತಿ ನೀಡಿದರು ವಿಶ್ವವಿದ್ಯಾಲಯದ ಸರ್ವಾಂಗೀಣ ಪ್ರಗತಿಯನ್ನು ಮುಂದುವರೆಸಿಕೊಂಡು ಹೋಗಲು ಸಮರ್ಥ ಕುಲಪತಿಗಳನ್ನು ಆಯ್ಕೆ ಮಾಡಬೇಕಾದ ಶೋಧನಾ ಸಮಿತಿಗೆ ಸರ್ಕಾರ, ವಿಶ್ವವಿದ್ಯಾನಿಲಯ ಹಾಗೂ ಸಂಯೋಜಿತ ಕಾಲೇಜುಗಳಿಗೆ ಸಂಬಂಧವಿಲ್ಲದೆ ಇರುವ ಗಣ್ಯವ್ಯಕ್ತಿಯ ಹೆಸರನ್ನು ಸೂಚಿಸಲು ಸಭಾಧ್ಯಕ್ಷರು ಸದಸ್ಯರನ್ನು ವಿನಂತಿಸಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 14(2) ರ ಅಡಿಯಲ್ಲಿ ಕುಲಪತಿಗಳ ನೇಮಕಾತಿಗಾಗಿ ಸರ್ಕಾರ ರಚಿಸಬೇಕಾದ ಶೋಧನಾ ಸಮಿತಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪ್ರತಿನಿಧಿಯಾಗಿ ನಾಮನಿರ್ದೇಶನ ಮಾಡಲು ಕೆಳಕಂಡ 4 ಹೆಸರುಗಳನ್ನು ಸದಸ್ಯರು ಪ್ರಸ್ತಾಪಿಸಿದರು.

| | |
|---|---|
| (1) ಪ್ರೊ. ಕರಿಸಿದ್ದಪ್ಪ | ವಿಶ್ರಾಂತ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ |
| (2) ಪ್ರೊ. ಬಿ. ಹನುಮಯ್ಯ | ವಿಶ್ರಾಂತ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ ಹಾಗೂ ಬಾಬಾಸಾಹೇಬ ಅಂಬೇಡ್ಕರ್ ವಿಶ್ವವಿದ್ಯಾಲಯ, ಲಖನೌ |
| (3) ಪ್ರೊ. ಎ. ಹೆಚ್. ರಾಜಾಸಾಬ್ | ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ |
| (4) ಪ್ರೊ. ಎಂ. ರಾಮಚಂದ್ರಗೌಡ | ವಿಶ್ರಾಂತ ಕುಲಪತಿಗಳು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ |

ಸಭೆಯಲ್ಲಿ ಉಪಸ್ಥಿತರಿದ್ದ ಬಹು ಸಂಖ್ಯೆಯ ಸದಸ್ಯರು ಪ್ರೊ. ಕರಿಸಿದ್ದಪ್ಪರವರನ್ನು ನಾಮನಿರ್ದೇಶನ ಮಾಡುವ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

*ಸಿಂಡಿಕೇಟ್ ತೀರ್ಮಾನ:*

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 14(2) ರ ಅಡಿಯಲ್ಲಿ ಡಾ. ಕರಿಸಿದ್ದಪ್ಪ, ವಿಶ್ರಾಂತ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರವಾಗಿ ಶೋಧನ ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಿ ಸರ್ಕಾರಕ್ಕೆ ಪತ್ರ ಬರೆಯಬಹುದೆಂದು ಬಹುಮತದಿಂದ ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 02

ವಿಷಯ: ಡಾ. ಟಿ.ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ಅಧ್ಯಯನ ವಿಭಾಗ ಇವರಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕರು ಶ್ರೇಣಿ 10 ರಿಂದ ಶ್ರೇಣಿ 11ಕ್ಕೆ ಸ್ಥಾನೀಕರಣವನ್ನು ದಿನಾಂಕ 30.11.2016 ಪರಿಗಣಿಸಿ ಶೈಕ್ಷಣಿಕ ಶ್ರೇಣಿ 11 ರಿಂದ 12 ಹಾಗೂ ಶೈಕ್ಷಣಿಕ ಶ್ರೇಣಿ 12 ರಿಂದ 13A ಸಹ ಪ್ರಾಧ್ಯಾಪಕ ಹುದ್ದೆಯ ಪದೋನ್ನತಿಗೆ ಸಲ್ಲಿಸಿರುವ ಅರ್ಜಿ ಪರಿಗಣಿಸುವಕುರಿತು

ಉಲ್ಲೇಖ:
1. Statutes Relating to Appointment and Promotion of Teachers and Other Academic Staff and Measures for Maintenance of Standards in Higher Education in the BCU, as per the UGC Regulations 2018
2. University Notification No. BCU/EST/CAS-APP/2024-25/380 dt.23-12-2024
3. ಡಾ. ತಾಂಡವಗೌಡ ರವರು ಸಲ್ಲಿಸಿದ ಪತ್ರ ಸಂಖ್ಯೆ: No.Dept.Eng/ BCU/ CAS/2024-25 ದಿನಾಂಕ. 09.01.2025
4. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ಬೆಂ.ನ.ವಿ/ಸಿಬ್ಬಂದಿ/ಸಿಎಎಸ್/2024-25/344 ದಿನಾಂಕ.26.11.2024
5. ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಪತ್ರಗಳ ದಿನಾಂಕ.30.01.2025 /10.02.2025
6. UGC Notification dt.31-07-2023

***<u>ಪರಮಾರ್ಶಕ ಟಿಪ್ಪಣಿ</u>***

ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ 2018ರ ಯುಜಿಸಿ ಪರಿನಿಯಮಾವಳಿ ಪ್ರಕಾರ CAS ಅಡಿಯಲ್ಲಿ ಮುಂದಿನ ಹಂತದ ಪದೋನ್ನತಿ ನೀಡಲು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲು ಉಲ್ಲೇಖ(2) ದಿನಾಂಕ: 23.12.2024 ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಗೆ ಸ್ಪಂದಿಸಿ ಆಂಗ್ಲ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಟಿ. ಎನ್. ತಾಂಡವ ಗೌಡ ಅವರು ನಿಗದಿತ ನಮೂನೆಯಲ್ಲಿ ಸಿಎಎಸ್ ಶೈಕ್ಷಣಿಕ ಶ್ರೇಣಿ 11 ರಿಂದ 12 ಹಾಗೂ ಸಹ ಪ್ರಾಧ್ಯಾಪಕ ಹುದ್ದೆಯಲ್ಲಿ ಗ್ರೇಡ್ 12 ರಿಂದ 13A ಗೆ ಅನುಬಂಧಗಳೊಡನೆ ಅರ್ಜಿಗಳನ್ನು ಸಲ್ಲಿಸಿದ್ದು ಅವುಗಳ ವಿವರ ಕೆಳಗಿನಂತಿದೆ.

| ಕ್ರ.ಸ | ಸಹಾಯಕ ಪ್ರಾಧ್ಯಾಪಕರ ಹೆಸರು ಮತ್ತು ವಿಭಾಗ | ವಿದ್ಯಾರ್ಹತೆ | ವಿಶ್ವವಿದ್ಯಾನಿಲಯ ಸೇವೆಗೆ ಸೇರಿದ ದಿನಾಂಕ | ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಗ್ರೇಡ್ 10 ರಿಂದ 11 ಕ್ಕೆಅರ್ಹತೆ ಹೊಂದುವ ದಿನಾಂಕ | ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಗ್ರೇಡ್ 11 ರಿಂದ 12 ಕ್ಕೆ ಅರ್ಹತೆ ಹೊಂದುವ ದಿನಾಂಕ | ಸಹ ಪ್ರಾಧ್ಯಾಪಕ ಹುದ್ದೆಯಲ್ಲಿ ಗ್ರೇಡ್ 12 ರಿಂದ 13A ಕ್ಕೆ ಅರ್ಹತೆ ಹೊಂದುವ ದಿನಾಂಕ |
|---|---|---|---|---|---|---|
| 01 | ಡಾ. ಟಿ. ಎನ್. ತಾಂಡವಗೌಡ ಇಂಗ್ಲೀಷ್ ಸ್ನಾತಕೋತ್ತರ ಅಧ್ಯಯನ ವಿಭಾಗ | MA English Ph.D, MBA SLET | 30-11-2012 (RCUB) 28-11-2020 (BCU) | 30-11-2016 | 30-11-2021 | 30-11-2024 |

ಡಾ. ಟಿ. ಎನ್. ತಾಂಡವ ಗೌಡ ರವರು ದಿನಾಂಕ 30.11.2012 ರಂದು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಆಂಗ್ಲ ವಿಷಯದ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ. ತದನಂತರ ಅವರು ಅಂತರ ವಿಶ್ವವಿದ್ಯಾಲಯಗಳ ವರ್ಗಾವಣೆಯಡಿಯಲ್ಲಿ ಕರ್ನಾಟಕ

ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 58ರ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 89 ಯುಬಿವಿ 2020, ದಿನಾಂಕ: 21.10.2020ರ ಪ್ರಕಾರ ವರ್ಗಾವಣೆ ಹೊಂದಿ ದಿನಾಂಕ 27.10.2020 ರಂದು ವರದಿ ಮಾಡಿಕೊಂಡಿರುತ್ತಾರೆ.

ಸದರಿ ಸಹಾಯಕ ಪ್ರಾಧ್ಯಾಪಕರ ಸೇವಾ ಪುಸ್ತಕದ ಪ್ರಕಾರ ಅವರ ಸೇವಾ ವಿವರಗಳು ಹಾಗೂ ಸಿಎಎಸ್ ಬಡ್ತಿಗಾಗಿ ಅರ್ಹತೆ ಹೊಂದುವ ದಿನಾಂಕಗಳು ಕೆಳಗಿನಂತಿವೆ.

| Sl. No. | Joining Date | Designation | Academic Level | Asper BCU Statutes Tenure | Eligibility Date for Promotion as per BCU Statues | Promoted under CAS by RCU, Belagavi | Remarks |
|---|---|---|---|---|---|---|---|
| 01 | 30-11-2012 | Assistant Professor | Academic Level – 10 | ----- | ----- | ----- | ----- |
| 02 | ----- | Assistant Professor | Academic Level – 10 | 04 | 30-11-2016 | 18.07.2020 (Academic Level – 10 to 11) | As per the RCU, Belagavi Office Order Dated: 09.01.2021 |
| 03 | ----- | Assistant Professor | Academic Level – 11 | 05 | 30-11-2021 (Academic Level – 11 to 12) | ----- | ----- |
| 04 | ----- | Assistant Professor | Academic Level – 12 | 03 | 30-11-2024 (Academic Level – 12 to 13A – i.e Associate Professor) | ----- | ----- |
| | | | | **12** | | | |
| Total Services as Assistant Professor to Associate Professor is **12 Years (30-11-2012 to 30-11-2024)** | | | | | | | |

ಉಲ್ಲೇಖ (1) ರ ಯುಜಿಸಿ ನಿಯಮಾವಳಿ ಹಾಗೂ ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರ ಸಿ.ಎ.ಎಸ್. ಯೋಜನೆ ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕರ ಶ್ರೇಣಿ 10 ರಿಂದ ಶ್ರೇಣಿ 11ಕ್ಕೆ ಪದೋನ್ನತಿ ಹೊಂದಲು ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

6.4 (IV) (C) I.

i. An Assistant Professor who has completed four years of service with a Ph.D. degree or five years of service with a M.Phil / PG Degree in Professional Courses, such as LLM, M.Tech, M.V.Sc. and M.D., or six years of service in case of those without a Ph.D/ M.Phil/PG Degree in a Professional course and satisfies the following conditions:

ii. Attended one Orientation course of21 days duration on teaching methodology

iii. Any one of the following: Completed Refresher/ Research Methodology Course/ Workshop / Syllabus Up-gradation Workshop/ Training Teachings-Learning-Evaluation, Technology Programmes/ Faculty Development Programmes of at least one week (5 days) duration, or taken one MOOCs course (with e-certification) or development of e-contents in four quadrants / MOOCs course during the assessment period; and

iv. Published one research publication in the peer-reviewed journals or UGC –listed journals during assessment period.

6.3(ii) If, however, the candidate finds that he/she would fulfils the CAS promotion criteria, as defined in Tables 1,2,3, and 5 of Appendix II at a later date and applies on that date and is successful, his/her promotion shall be effected from that date of the candidates fulfilling the eligibility criteria.

ಉಲ್ಲೇಖ(5) ರ ಯುಜಿಸಿ ಅಧಿಸೂಚನೆ ದಿನಾಂಕ:31–07–2023 ರಲ್ಲಿ ಅರ್ಹತಾ ಮಾನದಂಡಗಳಲ್ಲಿ Orientation/ Refresher Course ಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಪದೋನ್ನತಿಯನ್ನು ನೀಡಿ ಅವರಿಗೆ 31–12–2023 ರೊಳಗೆ Orientation/ Refresher Course ಗಳನ್ನು ಪೂರ್ಣಗೊಳಿಸುವ ಷರತ್ತಿನೊಂದಿಗೆ ಪದೋನ್ನತಿ ನೀಡಲು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ನಿಯಮಾನುಸಾರ ತಿದ್ದುಪಡಿ ಮಾಡಿ ಅವಕಾಶ ಕಲ್ಪಿಸಿರುತ್ತದೆ.

| Regulation | Existing Provisions | Amended provisions |
|---|---|---|
| 6.3 VIII | The requirement for the Orientation Course and Refresher Course for promotions due under the CAS shall not be mandatory up to 31st December 2018. | Wherever the requirement of the Orientation Course (OC) / Refresher Course (RC) has remained incomplete, the promotions would not be held up, but these requirements should be fulfilled by 31st December 2023 or as notified by the Commission from time to time. |

ಮೇಲಿನ ನಿಯಮಾವಳಿಗಳಂತೆ ಡಾ. ಟಿ. ಎನ್. ತಾಂಡವಗೌಡ ರವರು ದಿನಾಂಕ. 30.11.2016 ಕ್ಕೆ ಸಹಾಯಕ ಪ್ರಾಧ್ಯಾಪಕರು ಶೈಕ್ಷಣಿಕ ಶ್ರೇಣಿ 10 ರಿಂದ ಶೇಣಿ 11ಕ್ಕೆ ಪದನ್ನೋತಿ ಹೊಂದಲು ಅರ್ಹತೆ ಪಡೆಯುತ್ತಾರೆ. ಆದರೆ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 18.07.2020 ರಿಂದ ಅನ್ವಯಿಸಿ ಸಿಎಎಸ್ ಅಡಿಯಲ್ಲಿ ಶೈಕ್ಷಣಿಕ ಶ್ರೇಣಿ 10 ರಿಂದ 11ಕ್ಕೆ ಪದೋನ್ನತಿ ನೀಡಿರುತ್ತಾರೆ.

ಸದರಿ ಅಧ್ಯಾಪಕರು ದಿನಾಂಕ: 09.01.2025 ರಂದು ನೀಡಿರುವ ಪತ್ರದಲ್ಲಿ ತಾವು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಆಂತರಿಕ ವರ್ಗಾವಣೆ ಗೊಳ್ಳುವ ಮೊದಲು ಕಾರ್ಯನಿರ್ವಹಿಸುತ್ತಿದ್ದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದವರು ಸಹಾಯಕ ಪ್ರಾಧ್ಯಾಪಕರ ಶ್ರೇಣಿ 10 ರಿಂದ 11ಕ್ಕೆ ಪದೋನ್ನತಿ ನೀಡುವಾಗ ದಿನಾಂಕ: 30.11.2016 ಕ್ಕೆ ಅರ್ಹತೆ ಹೊಂದಿದ್ದರೂ ಆ ಸಂದರ್ಭದ ನಿಯಮಗಳ ಪ್ರಕಾರ ಅವರು Orientation/Refresher Course ಅನ್ನು ಪೂರ್ಣಗೊಳಿಸಿದ ದಿನಾಂಕದಿಂದ ಅನ್ವಯಿಸಿ ದಿನಾಂಕ: 18.07.2020 ಕ್ಕೆ 10 ರಿಂದ 11 ರ ಶ್ರೇಣಿಗೆ ಮುಂಬಡ್ತಿ ನೀಡಿದ್ದು ಯುಜಿಸಿ ಪರಿಷ್ಕೃತ ನಿಯಮಗಳ ಪ್ರಕಾರ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಪದೋನ್ನತಿಯನ್ನು ನೀಡಿ ಅವರಿಗೆ 31–12–2023 ರೊಳಗೆ Orientation/ Refresher Course ಗಳನ್ನು ಪೂರ್ಣಗೊಳಿಸುವ ಷರತ್ತಿನೊಂದಿಗೆ ಪದೋನ್ನತಿ ನೀಡಲು ಅವಕಾಶಗಳಿರುವುದರಿಂದ ದಿನಾಂಕವನ್ನು ಪರಿಷ್ಕರಿಸಿ ಆದೇಶ ನೀಡಲು ಕೋರಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರಿಗೆ ಬರೆದಿರುವ ಪತ್ರಕ್ಕೆ ಪ್ರತ್ಯುತ್ತರವಾಗಿ ಸದರಿ ಅಧ್ಯಾಪಕರು ಈಗಾಗಲೇ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಆಂತರಿಕ ವಿಶ್ವವಿದ್ಯಾನಿಲಯ ವರ್ಗಾವಣೆಗೊಂಡಿರುವುದರಿಂದ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ವಿಶ್ವವಿದ್ಯಾನಿಲಯದಿಂದಲೇ ಸ್ಥಾನೀಕರಣ ಅರ್ಹತಾ ದಿನಾಂಕವನ್ನು ಮರು

ನಿಗದಿಪಡಿಸಿಕೊಳ್ಳುವಂತೆ ದಿನಾಂಕ: 30.07.2024 ರಪತ್ರದಲ್ಲಿ ತಿಳಿಸಿರುವುದಾಗಿ ತಿಳಿಸುತ್ತಾ ಈ ಹಿನ್ನೆಲೆಯಲ್ಲಿ ಅವರ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಶ್ರೇಣಿ 10 ರಿಂದ 11ರ ಪದೋನ್ನತಿ ದಿನಾಂಕವನ್ನು ಅರ್ಹತೆ ಹೊಂದಿದ ದಿನಾಂಕ: 30.11.2016 ಕ್ಕೆ ಎಂದು ಪುನರ್ ಪರಿಶೀಲಿಸಿ ಸರಿಪಡಿಸಿಕೊಡುವಂತೆ ಪತ್ರದ ಮುಖೇನ ಕೋರಿರುತ್ತಾರೆ.

ಸದರಿ ಸಹಾಯಕ ಪ್ರಾಧ್ಯಾಪಕರು, CAS ಪದೋನ್ನತಿ ಅಡಿ ಸ್ಥಾನೀಕಾರಣ ಅರ್ಹತಾ ದಿನಾಂಕವನ್ನು ಮರು ನಿಗದಿಪಡಿಸಿ ಕೊಡುವಂತೆ ರಾಣಿಚನ್ನಮ್ಮ ವಿಶ್ವವಿದ್ಯಾನಿಲಯಕ್ಕೆ ಉಲ್ಲೇಖ (3) ದಿನಾಂಕ: 26-11-2024 ರಂದು ಪತ್ರ ಬರೆಯಲಾಗಿತ್ತು. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರು ಡಾ. ಟಿ. ಎನ್ ತಾಂಡವಗೌಡ ಅವರು ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅವರ ಸೇವಾ ಪುಸ್ತಕವನ್ನು ನಮ್ಮ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವುದರಿಂದ CAS ಶೈಕ್ಷಣಿಕ ಶ್ರೇಣಿ 10 ರಿಂದ 11ರ ಸ್ಥಾನೀಕರಣ ದಿನಾಂಕವನ್ನು 30.11.2016ಕ್ಕೆ ಮರು ನಿಗದಿಪಡಿಸಲು ಈ ವಿಶ್ವವಿದ್ಯಾನಿಲಯದ ಹಂತದಲ್ಲೇ ಕ್ರಮಕೈಗೊಳ್ಳಲು ತಿಳಿಸಿದ್ದಾರೆ.

ಮೇಲೆ ವಿವರಿಸದ ಅಂಶಗಳ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದ ಅಧಿಸೂಚನೆ ದಿನಾಂಕ:31-07-2023 ರ ಪ್ರಕಾರ ಅರ್ಹತಾ ಮಾನದಂಡಗಳಾದ Orientation/Refresher Course ಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಅವರಿಗೆ 31-12-2023 ರೊಳಗೆ Orientation/Refresher Course ಗಳನ್ನು ಪೂರ್ಣಗೊಳಿಸುವ ಷರತ್ತಿನೊಂದಿಗೆ ಪದೋನ್ನತಿ ನೀಡಲು ಅವಕಾಶ ಇರುವುದರಿಂದ ಡಾ.ಟಿ.ಎನ್.ತಾಂಡವಗೌಡ ಅವರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಅವರ ಶೈಕ್ಷಣಿಕ ಶ್ರೇಣಿ 10 ರಿಂದ 11 ಪದೋನ್ನತಿಯ ದಿನಾಂಕವನ್ನು 30-11-2016 ಎಂದು ಪರಿಗಣಿಸಲು ಹಾಗೂ ಶೈಕ್ಷಣಿಕ ಶ್ರೇಣಿ 11 ರಿಂದ 12 ಮತ್ತು ಶೈಕ್ಷಣಿಕ ಶ್ರೇಣಿ 12 ರಿಂದ 13A ಸಹ ಪ್ರಾಧ್ಯಾಪಕ ಹುದ್ದೆಯ ಪದೋನ್ನತಿಗೆ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸುವ ಕುರಿತು ಸಿಂಡಿಕೇಟ್ ಸಭೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಡಾ. ಟಿ. ಎನ್. ತಾಂಡವ ಗೌಡ, ಸಹಾಯಕ ಪ್ರಾಧ್ಯಾಪಕರು ಆಂಗ್ಲ ಅಧ್ಯಯನ ವಿಭಾಗ ಇವರಿಗೆ **UGC-CAS ಯೋಜನೆಯ ಪ್ರಕಾರ ಪದೋನ್ನತಿ ನೀಡುವ ಕುರಿತು ಕೆಳಗಿನಂತೆ ಸರ್ವಾನುಮತದಿಂದ ನಿರ್ಣಯಿಸಿತು:**

**(1) ಸಹಾಯಕ ಪ್ರಾಧ್ಯಾಪಕರ ಶೈಕ್ಷಣಿಕ ಶ್ರೇಣಿ 10 ರಿಂದ 11ರ ಪದೋನ್ನತಿಯ ಅರ್ಹತಾ ದಿನಾಂಕವನ್ನು 31.07.2023ರ ಯುಜಿಸಿ ಅಧಿಸೂಚನೆಯ ಪ್ರಕಾರ 30.11.2016 ರಿಂದ ಪೂರ್ವಾನ್ವಯಗೊಳಿಸಿ ಕಾಲ್ಪನಿಕವಾಗಿ ಯಾವುದೇ ಹಣಕಾಸಿನ ಬಾಧ್ಯತೆ ಇಲ್ಲದೆ ಸ್ಥಾನೀಕರಿಸಿ ಆದೇಶ ನೀಡಲು ಸಭೆ ತೀರ್ಮಾನಿಸಿತು, (2) ಸಹಾಯಕ ಪ್ರಾಧ್ಯಾಪಕರ ಶೈಕ್ಷಣಿಕ ಶ್ರೇಣಿ 10 ರಿಂದ 11ರ ಪರಿಷ್ಕೃತ ಸ್ಥಾನೀಕರಿಸಿದ ದಿನಾಂಕದ ಆಧಾರದ ಮೇಲೆ ಅವರಿಗೆ ಶೈಕ್ಷಣಿಕ ಶ್ರೇಣಿ 11 ರಿಂದ 12ಕ್ಕೆ ಪದೋನ್ನತಿ ನೀಡಲು ಮತ್ತು (3) ಸಹಾಯಕ ಪ್ರಾಧ್ಯಾಪಕರ ಶೈಕ್ಷಣಿಕ ಶ್ರೇಣಿ 12 ರಿಂದ ಸಹ ಪ್ರಾಧ್ಯಾಪಕರ ಶೈಕ್ಷಣಿಕ ಶ್ರೇಣಿ 13A ಹುದ್ದೆಗೆ ಡಾ. ತಾಂಡವಗೌಡರವರು ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಿ ನಿಯಮಾನುಸಾರ ಪದೋನ್ನತಿ ನೀಡಲು ಅಗತ್ಯ ಕ್ರಮವಹಿಸಲು ಅಧಿಕಾರ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 03**

ವಿಷಯ: ಶ್ರೀ ಡಿ. ಅಶ್ವಥಪ್ಪ, ವಕೀಲರು, ವಿಶ್ವವಿದ್ಯಾನಿಲಯದ ನ್ಯಾಯವಾದಿಗಳು, ಅವರಿಗೆ ಕಾರ್ಮಿಕ ನ್ಯಾಯಾಲಯದಲ್ಲಿ ವಿಶ್ವವಿದ್ಯಾನಿಲಯ ಪರವಾಗಿ ವಾದಿಸಲು ಪಾವತಿಸಬೇಕಾದ ವೃತ್ತಿ ಶುಲ್ಕವನ್ನು ಮಂಜೂರು ಮಾಡುವಕುರಿತು.

ಉಲ್ಲೇಖ:
1. ವಿ.ವಿ. ಅಧಿಸೂಚನೆ ಸಂಖ್ಯೆ: ಬೆಂ.ನ.ವಿ/ವಿ.ವ.ತಂ.ರ./2020-21, ದಿನಾಂಕ: 14.10.2020.
2. ವಿ.ವಿ. ಅಧಿಸೂಚನೆ ಸಂಖ್ಯೆ: ಬೆಂ.ನ.ವಿ/ವಿ.ವ.ತಂ.ರ/230/2020-21, ದಿನಾಂಕ: 16.10.2020.
3. ವಿ.ವಿ. ಪತ್ರ ಸಂಖ್ಯೆ: ಬೆಂ.ನ.ವಿ/ಕಾನೂನು ವಿಭಾಗ/ಉಕಾಅಬೆಂ/ಕವೇಕಾ/1/2021-22, ದಿನಾಂಕ: 02.07.2021.
4. ವಿ.ವಿ. ಆದೇಶ ಸಂಖ್ಯೆ: BCU.LC.SO:11:2021-22, dated: 14.07.2021.
5. ಶ್ರೀ ಡಿ. ಅಶ್ವಥಪ್ಪ, ವಕೀಲರು ಅವರ ಪತ್ರ ದಿನಾಂಕ: 22.07.2024 & 13.02.2025.

***ಪರಮಾರ್ಶಕ ಟಿಪ್ಪಣಿ***

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸ್ವಚ್ಛತಾ ಕಾರ್ಮಿಕರಿಗೆ ನೀಡಬೇಕಾಗಿರುವ ಕನಿಷ್ಠ ವೇತನದ ವ್ಯತ್ಯಾಸ ಮೊತ್ತರೂ. 56,13,242/-ಕ್ಕೆ ಪಾವತಿಗೆ ಸಂಬಂಧಿಸಿದಂತೆ ಉಪಕಾರ್ಮಿಕ ಆಯುಕ್ತರು ಹಾಗೂ ಕನಿಷ್ಠ ವೇತನ ಪ್ರಾಧಿಕಾರಿ ಪ್ರಾದೇಶಿಕ-2 ಇವರ ಮುಂದೆ ಅರ್ಜಿದಾರರಾದ ಕರ್ನಾಟಕ ಸರ್ಕಾರದ ಹಿರಿಯ ಕಾರ್ಮಿಕ ನಿರೀಕ್ಷಕರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಸಚಿವರ ವಿರುದ್ಧ ಮೊಕದ್ದಮೆ ಹೂಡಿರುತ್ತಾರೆ. (ಮೊಕದಮ್ಮೆ ಸಂಖ್ಯೆ: UKABEM-2/KVERA/CR-316/2021-22)

ಈ ಮೊಕದ್ದಮೆಗೆ ಸಂಬಂಧಿಸಿದಂತೆ, ಶ್ರೀ ಡಿ. ಅಶ್ವಥಪ್ಪ, ವಕೀಲರು, ಅವರನ್ನು ಉಲ್ಲೇಖಿತ (3) ರಲ್ಲಿ ವಿಶ್ವವಿದ್ಯಾನಿಲಯದ ನ್ಯಾಯವಾದಿಯಾಗಿ ನಿಯೋಜಿಸಲಾಗಿತ್ತು (ಅನುಬಂಧ-1). ಈ ಕುರಿತಂತೆ ಸದರಿ ವಕೀಲರು ಇಲ್ಲಿಯವರೆಗೂ ರೂ.1.50 ಲಕ್ಷವನ್ನು ವೆಚ್ಚ ಮಾಡಿರುವುದಾಗಿ ತಿಳಿಸಿ, ವೆಚ್ಚ ಮಾಡಿರುವ ಮೊತ್ತವನ್ನು ಮರುಪಾವತಿ ಮಾಡುವಂತೆ ಉಲ್ಲೇಖಿತ (4) ರ ಪತ್ರಗಳಲ್ಲಿ ಕೋರಿರುತ್ತಾರೆ (ಅನುಬಂಧ-2). ವಿವರಗಳು ಕೆಳಗಿನಂತಿವೆ.

| Sl. No. | Description | Amount in Rs. |
|---|---|---|
| 1 | Appearance & Misc. Charges at the Office of Labour Commissioner at Bagalagunte more than two times. | 10,000-00 |
| 2 | Appearance & Misc. charges at the Office of Labour Commissioner at KarmikaraBhavana from 2022 to 2024. | 15,000-00 |
| 3 | Misc. Charges/Clerkage | 15,000-00 |
| 4 | Scrutiny of papers, consultation and preparation & filing of Statement of objections | 1,10,000-00 |
| **Total** | | **1,50,000-00** |

ದಿನಾಂಕ: 11.09.2020 ರಂದು ಜರುಗಿದ ಸಿಂಡಿಕೇಟ್ ತೀರ್ಮಾನದ ಪ್ರಕಾರ ಉಲ್ಲೇಖ (2) ರ ಅಧಿಸೂಚನೆಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ವಿಶ್ವವಿದ್ಯಾನಿಲಯದ ಪರವಾಗಿ ಮೊಕದ್ದಮೆಗಳನ್ನು ದಾಖಲಿಸಲು ಹಾಗೂ ಪ್ರತಿವಾದಿಯಾಗಿ ಪ್ರಕರಣಗಳನ್ನು ನಿರ್ವಹಿಸಲು ನ್ಯಾಯವಾದಿಗಳ ಪಟ್ಟಿಯನ್ನು ಅಧಿಸೂಚಿಸಲಾಗಿದೆ

(ಅನುಬಂಧ-3). ನಂತರ ದಿನಾಂಕ: 17.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ (1) ಅಗತ್ಯ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳ ಸೇವೆ ಪಡೆಯಲು ಹಾಗೂ ಅವರಿಗೆ ನೀಡಬೇಕಾದ ಸಂಭಾವನೆ ಕುರಿತಂತೆ ಪ್ರಕರಣದ ಗಂಭೀರತೆ ಹಾಗೂ ಸಂದರ್ಭಕ್ಕನು ಗುಣವಾಗಿ ತೀರ್ಮಾನ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. (2) ನ್ಯಾಯವಾದಿಗಳ ಪಟ್ಟಿಯಲ್ಲಿ ಶಿಕ್ಷಣ ವಿಷಯದಲ್ಲಿ ಪರಿಣಿತಿ ಹೊಂದಿದ ನ್ಯಾಯವಾದಿಗಳ ಹೆಸರುಗಳನ್ನು ಸೇರಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಲಾಗಿದೆ.

ಉಲ್ಲೇಖ (1) ರ ವಿಶ್ವವಿದ್ಯಾನಿಲಯಗಳ ಅಧಿಸೂಚನೆಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣವನ್ನು ದಾಖಲಿಸಲು, ವಾದಿಪ್ರತಿವಾದಿಯಾಗಿ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ನಿರ್ವಹಿಸಲು ದರಗಳನ್ನು ನಿಗದಿಪಡಿಸಲಾಗಿದೆ (ಅನುಬಂಧ-4).

ಶ್ರೀ ಡಿ. ಅಶ್ವಥಪ್ಪ, ವಕೀಲರು, ಅವರಿಗೆ ಸದರಿ ವಿಶ್ವವಿದ್ಯಾನಿಲಯದ ಅಧಿಸೂಚನೆ ಪ್ರಕಾರ ಗರಿಷ್ಠ ಮೊತ್ತ ರೂ.40,000/- ಗಳನ್ನು ಪಾವತಿಸಲು ಆದೇಶಿಸಲಾಗಿದೆ. ವಿಶ್ವವಿದ್ಯಾನಿಲಯದ ಅಧಿಸೂಚನೆ ಪ್ರಕಾರ ನಿಗದಿಪಡಿಸಲಾದ ಗರಿಷ್ಠ ರೂ.40,000/- ಮೊತ್ತಕ್ಕಿಂತ ಹೆಚ್ಚಿನ ಮೊತ್ತವಾದ ರೂ. 1,10,000-00 ಅನ್ನು ಪಾವತಿಸುವ ಕುರಿತು ಮತ್ತು ಉಲ್ಲೇಖ (1) ರಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿದ ದರಗಳ ಪರಿಷ್ಕರಣೆಕುರಿತಂತೆ ಪರಿಶೀಲಿಸಲು ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

*__ಸಿಂಡಿಕೇಟ್ ತೀರ್ಮಾನ:__*

**ವಿಶ್ವವಿದ್ಯಾನಿಲಯದ ನ್ಯಾಯವಾದಿಗಳಾದ ಶ್ರೀ ಡಿ. ಅಶ್ವಥಪ್ಪ ರವರು ಈ ಪ್ರಕರಣ ಕುರಿತಂತೆ ಸಲ್ಲಿಸಿರುವ ಹೆಚ್ಚುವರಿ ಸೇವೆಯನ್ನು ಗಣನೆಗೆ ತೆಗೆದುಕೊಂಡು ವಿಶೇಷ ಸಂದರ್ಭವೆಂದು ಪರಿಗಣಿಸಿ ಅವರಿಗೆ ರೂ.1,10,000/- (ರೂ ಒಂದು ಲಕ್ಷ ಹತ್ತು ಸಾವಿರ ಮಾತ್ರ) ಗಳನ್ನು ಮಂಜೂರಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 04**

Sub: Designation of Chairpersons of School of Management Studies and Centre of Global Languages as Directors of respective School and Centre.

Ref: Syndicate Resolution dated: 28.02.2024

***__Reference Note:__***

As per the resolution of the Syndicate referred above, the name of the Canara Bank School of Management Studies has been changed as BCU School of Management Studies. Further this school is imparting both undergraduate and post-graduate courses under different specialisations. Secondly, the Centre for Global Languages is dealing with 14 foreign languages offering the courses such as certificate, diploma, higher diploma, graduate and postgraduate degrees.

The BCU School of Management Studies and the Centre for Global Languages need to be headed by the Directors considering their diversified academic activities. Hence it is proposed to designate the Chairpersons of the BCU School of Management Studies and Centre for Global languages as Directors of the respective School and Centre.

The matter is placed before the Syndicate for consideration and approval.

*ಸಿಂಡಿಕೇಟ್ ತೀರ್ಮಾನ:*

**BCU School of Management Studies** ಹಾಗೂ **Centre for Global Languages** ಗಳ ಮುಖ್ಯಸ್ಥರ ಪದನಾಮವನ್ನು ನಿರ್ದೇಶಕರು (**Director**) ಎಂದು ಬದಲಿಸಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು.

**ಸಾಮಾನ್ಯ ವಿಷಯಗಳ ಚರ್ಚೆ:**

1. ಮಾನ್ಯ ಸದಸ್ಯರಾದ ಡಾ. ಬಿ. ಆರ್. ಸುಪ್ರೀತ್ ರವರು ಸಿಂಡಿಕೇಟ್ ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ಯೆಗಳನ್ನು ಹೆಚ್ಚಿಸುವ ಕುರಿತು ಕ್ರಮಕೈಗೊಳ್ಳಬೇಕೆಂದು ಪ್ರಸ್ತಾಪಿಸಿದರು.
   ಈ ಕುರಿತು ರಾಜ್ಯ ಸರ್ಕಾರದ ನಿಯಮಾವಳಿಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

2. ಮಾನ್ಯ ಸದಸ್ಯರಾದ ಶ್ರೀ ವಿ. ಶಿವಕುಮಾರ್ ರವರು ವಿಶ್ವವಿದ್ಯಾನಿಲಯ ಆಯೋಜಿಸುವ ವಿವಿಧ ಸಮಾರಂಭಗಳಿಗೆ ಸಿಂಡಿಕೇಟ್ ಸದಸ್ಯರನ್ನು ಆಹ್ವಾನಿಸಬೇಕೆಂದು, ಇದರಿಂದ ವಿಶ್ವವಿದ್ಯಾಲಯದ ಚಟುಚಟಿಕೆಗಳ ಕುರಿತು ಅರಿತುಕೊಳ್ಳಲು ಸಹಾಯಕವಾಗುತ್ತದೆ ಎಂದು ಹೇಳಿದರು.

ಕುಲಸಚಿವರು ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು